

## ಅತಿಯಾದ್ರೆ ವಿಷ!

ನಮ್ಮ ಚಿಕ್ಕಮ್ಮನ ಮಗ ಚಿನ್ನು ಮಾತಿನ ಮಲ್ಲ. ನಮ್ಮ ಅಜ್ಜಿಗೆ ಆತನನ್ನು ಕಂಡರೆ ಅತಿಪ್ರೀತಿ. ಆತ ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನೇ ಪಡೆದಿದ್ದರೂ ಅಜ್ಜಿ ಮಾತ್ರ ‘ನೋಡು ಚಿನ್ನೂ, ನೀನು ಇನ್ನೂ ಚೆನ್ನಾಗಿ ಓದಿ, ಹೆಚ್ಚಿನ ಅಂಕಗಳನ್ನು ಪಡೆಯಬೇಕು’ ಅಂತ ಉಪದೇಶ ಮಾಡ್ತಾನೇ ಇರ್ತಾರೆ. ಕಳೆದ ಬೇಸಿಗೆಯಲ್ಲಿ ಆತ ನಮ್ಮಲ್ಲಿಗೆ ಬಂದಿದ್ದ. ನಮ್ಮ ತಂದೆ ‘ಫ್ಯಾಮಿಲಿ ಪ್ಯಾಕ್ ಐಸ್‌ಕ್ರೀಂ’ ತಂದಿದ್ದರು. ಆತ ಎರಡು–ಮೂರು ಕಪ್ ತಿಂದು ಇನ್ನೂ ಬೇಕು ಅಂದ. ಆಗ ಅಜ್ಜಿ, ‘ಬೇಡ ಚಿನ್ನೂ, ಅತಿಯಾದ್ರೆ ಅಮೃತಾನೂ ವಿಷ ಆಗುತ್ತೆ’ ಅಂದರು. ಆತ ಕೂಡಲೇ ‘ಅಲ್ಲಾ ಅಜ್ಜೀ ನಾನು ಎಷ್ಟು ಮಾರ್ಕ್ಸ್ ತಗೊಂಡ್ರೂ ಇನ್ನೂ ಹೆಚ್ಚಿಗೆ ತಗೋ ಅಂತೀರಲ್ಲ. ಹೆಚ್ಚಾದ್ರೆ ಅದೂ ವಿಷಾನೇ ಅಲ್ವಾ?’ ಎಂದು ತಿರುಗೇಟು ನೀಡಿದ.

**ಸಿಂಧು ಬಿ.ಎನ್.**

---

## ಆಡು ಭಾಷೆ



ನಮ್ಮ ಹಳ್ಳಿಯಲ್ಲಿ ಕಾರ್ಯಕ್ರಮವೊಂದು ನಡೆಯಲಿತ್ತು. ಹೆಚ್ಚು ಜನ ಸೇರುವುದು ಅನುಮಾನವಾಯಿತು. ಧ್ವನಿವರ್ಧಕದಲ್ಲಿ ಪ್ರಚಾರ ಮಾಡಿ ಜನ ಸೇರಿಸುವ ಪ್ರಯತ್ನ ಶುರುವಾಯಿತು. ಪ್ರಭಾವಿಯಾಗಿ ಪ್ರಚಾರ ಮಾಡಲು ಆರಿಸಿದ್ದು ಉತ್ತರ ಕರ್ನಾಟಕದ ಸುಬ್ಬನನ್ನು. ಜೋರಾದ ಪ್ರಚಾರ ಸುರುವಿಟ್ಟುಕೊಂಡ ಅವನು, ‘ಕಾರ್ಯಕ್ರಮಕ್ಕೆ ಬನ್ನಿ, ಹಾಸ್ಯಗಾರ ಗಂಗಾವತಿ ಪ್ರಾಣೇಶನಿಗಿಂತ ಹೆಚ್ಚ್ ಹಾಸ್ಯಾ ಮಾಡ್ತಾನ್ರಿ... ಅವನ ಮಾತು ಕೇಳಲು ಮರಿಬ್ಯಾಡ್ರಿ’ ಎಂದಾಗ ಅವನ ಆಡು ಭಾಷೆಗೆ ಜನ ನಕ್ಕರು. ಕಾರ್ಯಕ್ರಮಕ್ಕೆ ಹೆಚ್ಚು ಜನ ಸೇರಿದರೆಂದು ಬೇರೆ ಹೇಳಬೇಕಿಲ್ಲವಲ್ಲ!

**ಫಾಲನೇತ್ರ ಗಂಗಪ್ಪ ಸಜ್ಜನ**